**ದಿನಾಂಕಃ 22.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.NVN ವಕೀಲರಿಂದಃ</u>**

ಸದರಿ ನನ್ನ ಗಂಡ ಚಲಾಯಿಸುತ್ತಿದ್ದ ಟಿವಿಎಸ್ ಎಕ್ಸೆಲ್ ನಮ್ಮ ಅಣ್ಣನಿಗೆ ಸೇರಿದ್ದು ಇರುತ್ತದೆ. ಸದರಿ ಟಿವಿಎಸ್ ಎಕ್ಸೆಲ್ ನ ಮಾಲೀಕರು ಗೋವಿಂದರಾಜು ಇರುತ್ತಾರೆ. ಸದರಿ ನನ್ನ ಗಂಡನಿಗೆ ಚಲಾನ ಪರವಾನಗಿ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವಾದ ದಿವಸ ನನ್ನ ಗಂಡ ಗಾರೇ ಕೆಲಸಕ್ಕೆ ಹೋಗುತ್ತಿದ್ದರು. ಸದರಿ ನನ್ನ ಗಂಡ ಜಕೆಲಸಕ್ಕೆ ಹೋಗುತ್ತಿದ್ದ ಸ್ಥಳ ನಮ್ಮ ಮನೆಯಿಂದ 5 ಕಿ.ಮೀ. ದೂರದಲ್ಲಿರುತ್ತದೆ. ಸದರಿ ಅಪಘಾತವಾಗಿದೆ ಎಂದು ಹೇಳಿದ ಸ್ಥಳ ಕ್ಯಾತಸಂದ್ರ ಊರ್ಡಿಗೆರೆ ರಸ್ತೆಯಲ್ಲಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನ ದಟ್ಟನೆ ಇರುತ್ತದೆ ಎಂದರೆ ಸರಿ. ಸದರಿ ಅಪಘಾತವಾಗಿದೆ ಎಂದು ಹೇಳಿದ ಸಮಯ ಸಂಜೆ 06.30 ಎಂದರೆ ಸರಿ. ಸದರಿ ನನ್ನ ಗಂಡ ಅಪಘಾವಾಗಿದೆ ಎಂದು ಹೇಳಿದ ದಿವಸ ಹೆಲ್ಮೆಟ್ ಧರಿಸದೇ ಮದ್ಯಪಾನ ಮಾಡಿಕೊಂಡು ಹೋಗುತ್ತಿದ್ದಾಗ ಯಾವುದೋ ಬೇರೆ ವಾಹನ ಅಪಘಾತ ಮಾಡಿದೆ ಎಂದರೆ ಸರಿಯಲ್ಲ. ಸದರಿ ಅಪಘಾತವಾದ ತಕ್ಷಣ ನನ್ನ ಗಂಡನನ್ನು ತುಮಕೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದೆವು. ಸದರಿ ಅಪಘಾತ ಹೇಗಾಯಿತು ಎಂದು ಪೊಲೀಸರ ಬಳಿ ಮತ್ತು ವೈದ್ಯರ ಬಳಿ ಹೇಳಿದ್ದೆವು.

ಸದರಿ ಈ ಕೇಸಿನಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೆನು. ಸದರಿ ಅಪಘಾತದ ಕೇಸಿನಲ್ಲಿ ಹಾಕಿದ ದೋಷಾರೋಪಣ ಪಟ್ಟಿಯಲ್ಲಿ ಕುಡಿದು ವಾಹನ ಚಲಾಯಿಸುತ್ತಿದ್ದರು ಮತ್ತು ವಾಹನ ಚಾಲನ ಪರವಾನಗಿ ಇಲ್ಲ ಎಂದು ನನ್ನ ಗಂಡನ್ನನ್ನು 2ನೇ ಆರೋಪಿಯನ್ನಾಗಿ ಮಾಡಿದ್ದಾರೆ ಎಂದರೆ ಸರಿ. ಅದೇರೀತಿ ಟಿವಿಎಸ್ ಎಕ್ಸೆಲ್ ಮಾಲೀಕಾರದ ಗೋವಿಂದರಾಜು ಅವರ ಮೇಲೂ ಸಹ ಚಾಲನ ಪರವಾನಗಿ ಇಲ್ಲದ

ವ್ಯಕ್ತಿಗೆ ವಾಹನ ನೀಡಿದ್ದಾರೆ ಎಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಅಪಘಾತವು ನನ್ನ ಗಂಡನ ತಪ್ಪಿನಿಂದ ಆದ ಕಾರಣ ವಿಮೆ ಕಂಪನಿಯವರು ಪರಿಹಾರ ಕೊಡಲು ಭಾದ್ಯಸ್ತರಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ನನ್ನ ಗಂಡನ ಆಧಾರ್ ಕಾರ್ಡ್ ಮತ್ತು ನಮ್ಮ ಕುಟುಂಬದ ಪಡಿತರ ಚೀಟಿ ಇರುತ್ತದೆ. ಸದರಿ ನಮ್ಮ ಕುಟುಂಬಕ್ಕೆ ಬಿಪಿಎಲ್ ಕಾರ್ಡ್ ಇರುತ್ತದೆ. ಬಿಪಿಎಲ್ ಕಾರ್ಡನ್ನು ಬಡವರಿಗೆ ಕೊಡುತ್ತಾರೆ ಎಂದರೆ ಸರಿ . ಸದರಿ ನನ್ನ ಗಂಡ ತಿಂಗಳಿಗೆ 30 ಸಾವಿರ ರೂ. ದುಡಿಯುತ್ತಿದ್ದರು ಎಂದು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಅಪಘಾತದ ಸಮಯದಲ್ಲಿ ನನ್ನ ಗಂಡನಿಗೆ 46 ವರ್ಷವಾದ ಕಾರಣ ಆಧಾರ್ ಕಾರ್ಡ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಧಾರ್ ಕಾರ್ಡನ್ನು ಹಾಜರುಪಡಿಸಲು ನನಗೇನು ತೊಂದರೆ ಇರುವುದಿಲ್ಲ . ಸದರಿ ಆಟೋ ಚಾಲಕ ನನಗೆ ಪರಿಚಯವಿರುವ ಕಾರಣ ಅವರ ಆಟೋ ಮೇಲೆ ಸುಳ್ಳು ಕೇಸನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ.,
ತುಮಕೂರು.